ಜಲ ಸಂಪನ್ಮೂಲ ಸಚಿವರು

1. ಮಸ್ಕಿನಾಲಾ ಯೋಜನೆಯ ಕಾಮಗಾರಿ ಸಂಪೂರ್ಣ ಪೂರ್ಣಗೊಂಡಿದೆಯಾ?

ಪೂರ್ಣಗೊಂಡಿರುತ್ತದೆ.

2. ಹಾಗಿದ್ದಲ್ಲಿ ಅದಕ್ಕೆ ತಗುಲಿದ ವೆಚ್ಚ ಎಷ್ಟು?

ಒಟ್ಟು ರೂ.48.70 ಕೋಟಿಗಳು ವೆಚ್ಚವಾಗಿರುತ್ತದೆ.

3. ಮಸ್ಕಿನಾಲಾ ಯೋಜನೆಯ ಬಲ ಎಡದಂಡೆಯ ನಾಲೆಗಳ ಕೊನೆಯ ಭಾಗ ರೈತರಿಗೆ ನೀರು ತಲುಪುತ್ತಿದೆಯೇ?

ಮಸ್ಕಿನಾಲಾ ಯೋಜನೆಯ ಬಲ ಮತ್ತು ಎಡದಂಡೆ ನಾಲೆಗಳಲ್ಲಿ ವಾರಬಂದಿ ಪದ್ದತಿಯ ಮೂಲಕ ಕೊನೆಯ ಭಾಗದ ಅಚ್ಚುಕಟ್ಟು ಪ್ರದೇಶದ ರೈತರಿಗೆ ಸಮರ್ಪಕವಾಗಿ ನೀರು ತಲುಪಿಸಲಾಗುತ್ತಿದೆ.

4. ಬಲ-ಎಡ ಕಾಲುವೆಗಳಿಗಾಗಿ ಭೂಮಿ ಕಳೆದುಕೊಂಡ ರೈತರಿಗೆ ಸರ್ಕಾರ ಪರಿಹಾರ ಧನ ವಿತರಿಸಲಾಗಿದೆಯೇ?

ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳಿಗೆ ಭೂಸ್ವಾದೀನಾಧಿಕಾರಿಗಳು ನಿಗದಿಪಡಿಸಿದಂತೆ ರೈತರಿಗೆ ಪರಿಹಾರ ಧನ ವಿತರಿಸಲಾಗಿದೆ. ರೈತರು ಹೆಚ್ಚುವರಿ ಪರಿಹಾರಕ್ಕಾಗಿ ನ್ಯಾಯಾಲಯದ ಮೊರೆ ಹೋಗಿರುವುದರಿಂದ ನ್ಯಾಯಾಲಯದ ಆದೇಶಕ್ಕೆ ಅನುಗುಣವಾಗಿ ಹೆಚ್ಚುವರಿ ಪರಿಹಾರ ಧನವನ್ನು ಸಹ ಪಾವತಿಸಲಾಗುತ್ತಿದೆ.

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**:**	**(107)163**
2 ಸದಸ್ಯರ ಹೆಸರು	**:**	**ಶ್ರೀ. ಪುಟ್ಟರಾಜು.ಸಿ.ಎಸ್ (ಮೇಲುಕೋಟೆ)**
3 ವಿಷಯ	**:**	**ಮಂಡ್ಯ ತಾಲ್ಲೂಕಿನ ದುದ್ದ ಹೋಬಳಿಯ ಮಲ್ಲಿಗೆ ರೇಷ್ಮೆ ಫಾರಂ**
4 ಉತ್ತರಿಸುವವರು	**:**	**(ಶ್ರೀ ವೆಂಕಟರಮಣಪ್ಪ) ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು**

ಅ ಮಂಡ್ಯ ತಾಲ್ಲೂಕಿನ ದುದ್ದ ಹೋಬಳಿಯಲ್ಲಿರುವ ಮಲ್ಲಿಗೆ ರೇಷ್ಮೆ ಫಾರಂ ಪ್ರಾರಂಭವಾದದ್ದು ಯಾವಾಗ; ಹಾಗೂ ಆ ಫಾರಂನ ಕಾರ್ಯಚಟುವಟಿಕೆ ಬಗ್ಗೆ ಮಾಹಿತಿ ನೀಡುವುದು;

ಮಂಡ್ಯ ತಾಲ್ಲೂಕಿನ ದುದ್ದ ಹೋಬಳಿಯಲ್ಲಿರುವ ರೇಷ್ಮೆ ಫಾರಂನ್ನು 1980 ರಲ್ಲಿ ಪ್ರಾರಂಭಿಸಲಾಗಿದೆ. ಇದರ ಒಟ್ಟು ವಿಸ್ತೀರ್ಣ 100 ಎಕರೆಗಳು. ಈ ಕೃಷಿ

ಕ್ಷೇತ್ರದಲ್ಲಿ ಮೂಲ ಬಿತ್ತನೆ ಗೂಡಿನ ಉತ್ಪಾದನೆಯಲ್ಲದೆ ಈ ಕೆಳಕಂಡ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ.

1. ಸುಧಾರಿತ ಹಿಪ್ಪುನೇರಳೆ ತಳಿಗಳ ಸಸಿಗಳನ್ನು ಬೆಳಸಿ ರೈತರಿಗೆ ವಿತರಿಸುವುದು.
2. ದ್ವಿತಳಿ ಸಂಕರಣ ರೇಷ್ಮೆ ಮೊಟ್ಟೆಗಳನ್ನು ಚಾಕಿ ಸಾಕಾಣಿಕೆ ಮಾಡಿ ರೇಷ್ಮೆ ಬೆಳೆಗಾರರಿಗೆ ವಿತರಿಸುವುದು.
3. ಸಂಶೋಧನಾ ಸಂಸ್ಥೆಗಳು ಅಭಿವೃದ್ಧಿಪಡಿಸಿದ ಹೊಸ ತಳಿಗಳು ಮತ್ತು ತಾಂತ್ರಿಕತೆಗಳನ್ನು ಕ್ಷೇತ್ರಮಟ್ಟದ ಪರೀಕ್ಷೆಗೆ ಒಳಪಡಿಸಿ ಅವುಗಳ ಬಗ್ಗೆ ರೈತರಿಗೆ ಪ್ರಾತ್ಯಕ್ಷತಾ ತರಬೇತಿ ಒದಗಿಸುವುದು.
4. ಪಿ2 ಮೂಲ ದ್ವಿತಳಿಯ ಬಿತ್ತನೆ ಗೂಡು ಉತ್ಪಾದಿಸುವುದು.

ಪ್ರಸ್ತುತ ಈ ಕೃಷಿ ಕ್ಷೇತ್ರದಲ್ಲಿ 5.10 ಎಎಕರೆ ಹಿಪ್ಪುನೇರಳೆ ವಿಸ್ತೀರ್ಣವಿದೆ.

ಆ ಮಂಡ್ಯ ತಾಲ್ಲೂಕಿನ ರೈತರಿಗೆ ಈ ರೇಷ್ಮೆ ಫಾರಂನಿಂದ ಅನುಕೂಲವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ.

ಮಂಡ್ಯ ತಾಲ್ಲೂಕು ಅಷ್ಟೇ ಅಲ್ಲದೆ ರಾಜ್ಯಾದ್ಯಂತ ಈ ಕ್ಷೇತ್ರದಿಂದ ರೈತರಿಗೆ ಅನುಕೂಲವಾಗಿದೆ. ಪ್ರಾರಂಭದಲ್ಲಿ ಈ ಕ್ಷೇತ್ರದಲ್ಲಿ ಎಂ5 ಹಿಪ್ಪುನೇರಳೆ ಕಡ್ಡಿ/ಸಸಿಗಳನ್ನು ಬೆಳೆಸಿ ಆಸಕ್ತ ರೈತರಿಗೆ ಒದಗಿಸಲಾಗುತ್ತಿತ್ತು. ಸ್ಥಳೀಯ ಜನರಿಗೆ ಉದ್ಯೋಗಾವಕಾಶ ಸಹ ನೀಡಲಾಗಿತ್ತು. ಈಗ ದ್ವಿತಳಿ ಬಿತ್ತನೆ ಗೂಡಿನ ಉತ್ಪಾದನೆಯಲ್ಲಿ ಈ ಕ್ಷೇತ್ರವು ಸಹಕಾರಿಯಾಗಿದೆ. ಕಳೆದ 5 ವರ್ಷಗಳ ದ್ವಿತಳಿ ಬಿತ್ತನೆ ಗೂಡುಗಳ ಉತ್ಪಾದನಾ ವಿವರ ಮತ್ತು ಚಾಕಿ ಮಾಡಿ ರೈತರಿಗೆ ವಿತರಿಸಿದ ದ್ವಿತಳಿ ಸಂಕರಣ ಮೊಟ್ಟೆಗಳ ವಿವರ ಕೆಳಕಂಡಂತಿದೆ.

ವರ್ಷ	ಬಿತ್ತನೆ ಗೂಡುಗಳ ಉತ್ಪಾದನೆ (ಲಕ್ಷಗಳಲ್ಲಿ)	ಚಾಕಿ ಮಾಡಿ ವಿತರಿಸಿದ ಮೊಟ್ಟೆಗಳು
2003–04	1.41	19,150
2004–05	4.68	1,750
2005–06	3.37	12,250
2006–07	2.70	15,450
2007–08	1.65	35,150

ಈ ಮೇಲ್ಕಂಡ ಕಾರ್ಯ ಚಟುವಟಿಕೆಗಳಿಂದ ಈ ಕ್ಷೇತ್ರದ ಪ್ರಾರಂಭದ ಉದ್ದೇಶ ಸಫಲವಾಗಿದೆ.

ಇ ಹಾಗಿದ್ದಲ್ಲಿ, ಇದರ ಪುನಃಶ್ಚೇತನದ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಈ ಕ್ಷೇತ್ರವನ್ನು ಪಿ2 ಕ್ಷೇತ್ರವನ್ನಾಗಿ ಮತ್ತು ದ್ವಿತಳಿ ಸಂಕರಣ ರೇಷ್ಮೆ ಮೊಟ್ಟೆಗಳನ್ನು ಚಾಕಿ ಮಾಡಿ ಸ್ಥಳಿಯ ರೇಷ್ಮೆ ಬೆಳೆಗಾರರಿಗೆ ಒದಗಿಸುವ ಕೇಂದ್ರವನ್ನಾಗಿ ಮುಂದುವರೆಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(388)166**
ಸದಸ್ಯರ ಹೆಸರು	:	**ಶ್ರೀ. ಪುಟ್ಟರಾಜು ಸಿ.ಎಸ್ (ಮೇಲುಕೋಟೆ)**
ಉತ್ತರಿಸುವ ಸಚಿವರು	:	**(ಶ್ರೀ ಶಿವರಾಜ್ ಎಸ್.ತಂಡರಗಿ) ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು**

1 ಮಂಡ್ಯ ಸರ್ಕಾರಿ ಸಕ್ಕರೆ ಕಾರ್ಖಾನೆಯನ್ನು ನವೀಕರಣಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ;

ಮಂಡ್ಯ ಸಕ್ಕರೆ ಕಾರ್ಖಾನೆಯನ್ನು ನವೀಕರಣಗೊಳಿಸುವ ಸಂಬಂಧ 36.00 ಕೋಟಿ ರೂಗಳ ಬಂಡವಾಳ ಹೂಡಿಕೆ ಪ್ರಸ್ತಾವನೆಯನ್ನು ಕಾರ್ಖಾನೆಯಿಂದ ಸ್ವೀಕರಿಸಲಾಗಿದೆ. ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

2 ಹಾಗಿದ್ದಲ್ಲಿ, ನವೀಕರಣಕ್ಕಾಗಿ ಮೀಸಲಿಟ್ಟ ಹಣವೆಷ್ಟು ಹಾಗೂ ಖರ್ಚು ಮಾಡಿದ ಹಣವೆಷ್ಟು;

ನವೀಕರಣಕ್ಕಾಗಿ ಯಾವುದೇ ಹಣವನ್ನು ಮೀಸಲಿಟ್ಟಿರುವುದಿಲ್ಲ. 2005–06 ರಿಂದ 2008–09ರ ಈ ದಿನಾಂಕದವರೆಗೆ ಕಾರ್ಖಾನೆಗೆ 80.10 ಕೋಟಿ ರೂಗಳನ್ನು ದುಡಿಯುವ ಬಂಡವಾಳ ಮತ್ತು ಇತರೆ ಉದ್ದೇಶಗಳಿಗಾಗಿ ಸರ್ಕಾರದಿಂದ ಸಾಲವಾಗಿ ನೀಡಲಾಗಿದೆ.

3 ಪೂರ್ಣ ನವೀಕರಣಕ್ಕಾಗಿ ತಗಲುವ ವೆಚ್ಚವೆಷ್ಟು ಹಾಗೂ ನವೀಕರಣದ ನಂತರ ಕಬ್ಬು ಅರೆಯುವ ಸಾಮರ್ಥ್ಯ ಹೆಚ್ಚಾಗುವುದೇ (ವಿವರ ನೀಡುವುದು)?

ಕಾರ್ಖಾನೆಯ ನವೀಕರಣಕ್ಕಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಒಂದು ತಾಂತ್ರಿಕ ಸಮಿತಿ ರಚಿಸಲಾಗಿದ್ದು, ತಾಂತ್ರಿಕ ಸಮಿತಿಯು ನೀಡುವ ವರದಿಯಲ್ಲಿ ಯೋಜಿತ ನವೀಕರಣಕ್ಕೆ ಎಷ್ಟು ಹಣ ಬೇಕಾಗಬಹುದು ಎಂಬ ಮಾಹಿತಿ ಲಭ್ಯವಾಗಲಿದೆ. ಹಾಗೂ ಪ್ರಸ್ತುತ ಕಾರ್ಖಾನೆ ಸಾಮರ್ಥ್ಯ 5000 ಟಿಸಿಡಿ ಇದ್ದು ಕಾರ್ಖಾನೆಯ ನವೀಕರಣದ ನಂತರವೇ ಕಬ್ಬು ಅರೆಯುವ ಸಾಮರ್ಥ್ಯ ಹೆಚ್ಚಾಗುವ ಬಗ್ಗೆ ತಿಳಿಯಬಹುದಾಗಿದೆ.